# ಭ್ರಮರಗೀತೆ

ಶ್ರೀವನಜನಾಭನಾಜ್ಞೆಯಿಂದ ಸುಜನರ ಕಾರ್ಯಕ್ಕೆ
ಆವಾವ ವಿಘ್ನಗಳು ಬರಲು ಅದನಾಕ್ಷಣದೊ–
ಳೀ ವಸುಧೆಯೊಳಗೆ ಪರಿಹರಿಸಿ ಸಲಹುವ ನಮ್ಮ
ದೇವ ಹೊಟ್ಟೆಗಣಪ ಈಯೆಮಗೆ ಶುಭವ ॥ ೧ ॥
*
**ಶ್ಲೋಕ :** ಸಂಗೃಹ್ಯ ಪದಮಯ ಸೂತ್ರವರೇಣ ಕೃಷ್ಣ
ರಾಮಾವತಾರ ಚರಿತಾಭಿದ ರತ್ನರಾಶಿಂ ।
ತದ್ಭಕ್ತ ಭೂಸುರ ಕೃತೇ ಕೃತವಾದಿರಾಜ
ಭಿಕ್ಷುಃ ಪತತ್ಕವಿಕದಂಬಕ ಕಂಠಭೂಷಾಂ ॥

ಆವಾಗ ಹಯವದನನಮಲ ದಿವ್ಯ ಶ್ರೀಮೂರ್ತಿಯನೆ
ಭಾವಶುದ್ಧದಲಿ ನೆನೆವಂತೆ ಕೃಪೆಮಾಡು ।
ಶ್ರೀಭಾಗವತ ಮಹಾಪುರಾಣವನು
ಶ್ರೀಭ್ರಮರಗೀತೆಯನು ಶುಭಜನರೆಲ್ಲ ತಿಳಿಯಲು ॥

ಸು ವ್ಯಾಖ್ಯಾನದಿಂದ ವಿಸ್ತರಿಸಿ ಸುಳಾದಿತಾಳಗಳಿಂದ
ವಿರಚಿಸಿದನಾ ಮುನಿರಾಜಕಂಠೀರವ ।
ಸುಚರಿತ ಸುಗುಣ ವಾದಿರಾಜೇಂದ್ರ ಅಭಿನವ
ನಾಟಕ ಚರಿತ್ರವನು ಸಾವಧಾನದಿಂದ ಕೇಳಿ ಸಜ್ಜನರು ॥
*
ನವರಸಭರಿತ ಭ್ರಮರಗೀತೆಯರ್ಥವ
ವಿವರದಿಂದ ಬಿನ್ನೈಸಿ ।
ದಿವಿಜವಂದಿತ ಗೋವಿಂದನ ಸಮ್ಮುಖದಲಿ ನಾ–
ಟ್ಯವನಾಡಿಸುವೆ ನಾನು ॥ ೧ ॥

ನಲಿವುತ್ತ ಕೃಷ್ಣರನೆ ಪಾಡುತ್ತ ಗೋಕುಲದ ।
ಲಲನೆಯರೆಲ್ಲ ಒಲಿದು ಬಂದರು ॥ ೨ ॥
*

ಯಶೋದೆಯ ಕಂದ ನಮ್ಮ ತೊದಲ್ನುಡಿಗಳನು ಕೃಪಾಸಿಂಧು ಲಾಲಿಸೋ ।
ಅಘವಿಂ[ಡು]ಸೋಲಿಸೊ ಎಂದೆಂದು ಪಾಲಿಸೊ ಪ ॥

ಅಜಮಿಳನೊಬ್ಬನ ಕಾಯಿದೆ ಗಜೇಂದ್ರನಿಗಭಯವನಿತ್ತೆ
ತ್ರಿಜಗವನಳೆದು ದೇವೆಂದ್ರಗೆ ।
ರಾಜ್ಯವ ಮಝುಭಾಪೆನೆ ಕೊಟ್ಟೆ ಸುತಳದಿ
ಭಜಕ ಬಲಿಯನಿಟ್ಟೆ ಧರ್ಮಧ್ವಜಕೆ ನೀ ಬಲು ಕಟ್ಟೆ ॥ ೧ ॥

ಆಲದೆಲೆಯಮೇಲೆ ನೀ ಪುಟ್ಟಬಾಲಕನಾಗಿ ಮಲಗಿ
ಕಾಲ ಬೆರಳ ಚುಂಬಿಸುತ ಜಠರದಿ ಜಗ ।
ಜಾಲವನಾಂತೆ ಮುನ್ನ ಸ್ವಾಮಿ
ಪೋಲುವರಾರು ನಿನ್ನ ಕೃಪಾಳು ನೀನೆ ಪ್ರಸನ್ನ ॥ ೨ ॥

ಶ್ರುತಿತತಿಗಳ ತಂದು ಸುಜನರ ಮತಿಗೆ ಮಂಗಳವಿತ್ತೆ
ಕೃತಿಗಳರಸ ಹಯವದನನ ಪಾದವ ।
ಸತತ ನೆನೆವ ಭಕ್ತಕುಜನುನ್ನತ ಬಿಸಿಲಿಗೆ
ಬತ್ತ ಸಂಸಾರವಿಷದ ತರುವ ಕಿತ್ತ ॥ ೩ ॥
*
ಬಾರನೇಕೆ ಮುರಾರಿ ಮಧುರೆಯ
ನಾರಿಯರ ಮೆಚ್ಚಿದನೊ ನಮ್ಮ ವಿ-
ಚಾರವನು ಬಿಟ್ಟಲ್ಲಿ ಬಹುದಿನ ತಡೆದ
ಕಾರಣದಿ ವಾರಿಜಾನನೆ ಹೇಳು ಭ-
ಕ್ತರಾಧೀನನಲ್ಲವೆ ಕೃಷ್ಣರಾಯ-
ನುದಾರ ಚರಿತೆಯನು ಮ-
ಧುರಾಪುರದ ವಾರ್ತೆಯನು ॥

ಮಧುರೆಯಲ್ಲಿ ಮಲ್ಲರ ಗೆದ್ದು ಕಂಸನ್ನ ಸ-
ದೆದುಗ್ರಸೇನಗೆ ಪಟ್ಟವ ಕಟ್ಟಿ ।
ಮುದದಿಂದ ಗೋಪಿಯರ ಸಂತೈಸಬೇಕೆಂದು
ಸದುಗುಣ ನಿಧಿ ಸಂಭ್ರಮದಿ ಮನೆಗೆ ಬಂದ ॥
*

ಒಂದು ದಿವಸ ಶ್ರೀಕೃಷ್ಣಯಾದವ
ವೃಂದ ಸಹಿತೋಲಗದಿ ಗೋಪಿಯ
ರಂದು ತನ್ನನ್ನೆ ನಂಬಿದವರನು ಸಲಹಬೇಕೆನುತ
ಬಂಧುಪ್ರಿಯನ ಉದ್ಧವನ ಬರಹೇ
ಳೆಂದು ದೂತಗೆ ನೇಮಿಸಲು ಗೋ–
ವಿಂದನಟ್ಟಲು ಬಂದೆನೆಂದೆನುತ ಉದ್ಧವ ಪೊರವಂಟ
ಬಂದನುದ್ಧವ ಗೋವಿಂದನ ಪಾದಾರವಿಂದ
ಸಂದರುಶನ ಸಂಭ್ರಮಕೆ ಸಂತೋಷದಿಂದ ॥
*
ಏನನೆಂಬೆನು ಶ್ರೀಕೃಷ್ಣದೀನದೊರೆ ನೀನಾದ ಕಾರಣ
ಮಾನವರ ಸುರಧೇನು ಕಾರ್ಯವು ನಿನಗೆ ಸೇರಿತಲಾ
ಹೀನತೆಯ ಪರಿಹರಿಸಿ ಭಾಗ್ಯಾಂಬೋನಿಧಿಯ ನಿಜಗ್ರೀವ
ನಿನ್ನ ಮಹಾನುಭಾವನ ಒಲುಮೆಗೆಣೆಗಾಣೆನೊ ಮಹಾಪ್ರಭುವೆ ॥

ಎನ್ನ ಪ್ರಿಯ ಉದ್ಧವನೆ ಗುಣ ಸಂ–
ಪನ್ನ ಬಾರೈ ಈ ವ್ರಜದ ಗೋಪಿಯ
ರೆನ್ನ ನೆನೆನೆನೆದು ತನುಮನಧನಗಳನೀಡಾಡಿ
ಬನ್ನಬಡುವರವರಿದ್ದೆಡೆಗೆ ನೀ ಹೋಗಿ
ಎನ್ನ ವಚವನ ಹೇಳು ಇಷ್ಟಂಗ–
ಳನೀವನೆಂದು ಹೋಗಿ ಬಾ ನೀನು ॥
*
ಹರಿ ಕಳುಹಲುದ್ಧವ ಹರುಷವನೆ ಕೈಕೊಂಡು
ಭರದಿಂದ ಮಧುರೆಯನು ತೆರಳಿ
ಸಿರಿವಲ್ಲಭನ ವಾರುತೆಯ ತಿಳಿಸುವೆನೆಂದು
ತರುಣಿಯರಿದ್ದ ಗೋಕುಲಕೆ ತಾ ಬಂದ ॥
*
ನೀನೆತ್ತಲಿಂದಲಿ ಬಂದೆ ಉದ್ಧವ ಚಿತ್ತಜನಪಿತನಟ್ಟಿದನೊ
ತಾನತ್ತ ಸುಖದಲ್ಲಿಹನೊ ನಮ್ಮ ವಿಚಾರವನು ಮರೆದನೊ
ತನ್ನ ಹೆತ್ತ ತಾಯಿ ತಂದೆಯರ ನೋಡಲು ಇತ್ತ
ನಿನ್ನ ಕಳುಹಿದನೋ ಪುರುಷೋತ್ತಮನ
ಮನದೊಲವು ಮತ್ತೇನೆಂದು ಕೇಳಿದರು ॥
*

ನಿಲ್ಲಲಾರೆ ಹರಿಯ ಕಾಣದೆ ।
ನಿಲ್ಲಲಾರೆ ವಾಣಿಯ ಮಾವನ್ನ ರಂಗನ್ನ ಕಾಣದೆ ॥ ಪ ॥

ಗುಣಗಣಸಿಂಧುವಿನ ಅಸುರರ ಅಣಕದಿ ಕೊಲ್ಲುವನ ।
ಪೆಣ್ಣಿಗೆ ಮೋಹಿಸಿದ ಜಯಂತನ ತೃಣವೆಚ್ಚು ಗೆಲಿದವನ ॥ ೧ ॥

ಬಾಣಮಹಾಸುರನ ಸಾಸಿರ ಪಾಣಿಗಳ್ಳಂತಕನ ।
ಮಾಣವ ಶೇಷನಗಿ ತ್ರಿಲೋಕ ದಾನವ ಕೊಂಡವನ ॥ ೨ ॥

ಜಲಧಿಪತಿಯ ಮಥಿಸಿ ಅದರಿಂದ ಜಲಧಿಜೆಯಳ ತಂದನ ।
ಒಲಿದು ವಾದಿರಾಜನ ಸಲಹುವ ಸುಲಭ ಬಾಲಕೃಷ್ಣನ ॥ ೩ ॥
*
ಭ್ರಮರವನೆ ಗುರಿಮಾಡಿ ಹರಿಕಳುಹಿದುದ್ಧವನ ।
ಸಮ್ಮುಖದಿ ಗೋಕುಲದ ರಮಣಿಯಾಡಿದಳು ॥
*
ಮಂದಹಾಸದಿಂದ ಚಂದದ ಗೋವಿಂದ ।
ಇಂದಿರೇಶ ಹಯವದನ ಇಂದಿಗೆ ಬಂದ ॥
*
ಎಲೆ ಕಿತವಪ್ರಿಯ ಮಧುಪ ಈ ನಮ್ಮ ಸವತಿಯರ
ಮೊಲೆಯ ಕುಂಕುಮದ ಕುರುಹಿನ ಮೀಸೆಯ ।
ಮಲಿನ ಮುಟ್ಟದಿರೆಮ್ಮ ನಿಮ್ಮಚ್ಯುತನು ಮೆಚ್ಚಿದ
ಲಲನೆಯರು ಮುಡಿದ ಹೂಗಳ ಮುಡಿಯಲಿ ॥ ೧ ॥

ಅಮ್ಮಮ್ಮ ಜಗದ ಜನರನೆ ಮರುಳುಮಾಡುವ
ಉನ್ಮತ್ತ ರಸಗಳನು ನೀನು ಸೇವಿಪೆ ।
ನಮ್ಮ ನಲ್ಲನಿಗದರ ಸವಿಯನೂಡಿದೆಯೊ ಮಧುಪ
ಸುಮ್ಮನೆ ನಂಬಿದವರನು ಬಿಡುವನೆ ॥ ೨ ॥

ಹೊಕ್ಕು ಕೆಲವರ ಗೆಲುವ ನಕ್ಕು ಕೆಲವರ ಗೆಲುವ
ಸೊಕ್ಕಿದರೆ ಮುರಿವ ಭಕ್ತರನು ಪೊರೆವ ।
ಮಕ್ಕಳಂತೆ ಹಸಿದೆನೆಂದಳುವ ಬೆಣ್ಣೆಯ ಕಳುವ
ರಕ್ಕಸದಲ್ಲಣನಿವ ಕಿತವನಲ್ಲವೆ ॥ ೩ ॥

ಬುದ್ಧರೂಪದಿ ಪುರದ ಪೆಣ್ಗಳಿಗೆ ಕೃಷ್ಣ ದು–
ರ್ಬುದ್ಧಿಯನು ಕಲಿಸಿ ಕಪಟದಿ ಬಲಿಯನು ।
ಗೆದ್ದು ಅವ ಕೊಂದನೊಳ್ಪದಾಘಾತವ ಮಾಡಿದ
ನದಟ ಕುಜನರಿಗಿವ ಕಿತವನಲ್ಲವೆ ॥ ೪ ॥

ಭೀಮಸೇನನ ಕೈಯಿಂದ ಕೊಲ್ಲಿಸಬೇಕೆಂದು ಜರಾಸಂಧನ
ಈ ಮಹಿಯೊಳುಳಿಯದಂತೆ ಮಾಡಿದ ।
ಭೂಮಿದೇವರೂಪದಿಂದವನ ಪುರಕೈದಿ
ಸಾಮದಿಂದ ಕೊಲ್ಲಿಸಿದವ ಕಿತವನಲ್ಲವೆ ॥ ೫ ॥

ಅದುಹೋಗಲಿ ನಮ್ಮೊಳೊಬ್ಬ ಸುದತಿಯ ಬಯಸಿ ಮತ್ತೆ
ಮದನ ಪಿತ ಮೆಚ್ಚಿ ಮತ್ತವಳ ಮರೆತ ।
ಮದವ ಕಂಡು ಕಣ್ಗೆ ತೋರದೆಪೋದನೆಲೆ ಮಧುಪ
ಅಧಮಚರಿತರಿಗಿವ ಕಿತವನಲ್ಲವೆ ॥ ೬ ॥

ಮಧುವೆಂದು ಮದ್ಯಕೆ ಪೆಸರುಂಟು ವಿಧಿಗಳ ಮತದಿ
ತ್ರಿದಶವೈರಿಗಳದನು ಕುಡಿದು ಕುಡಿದು ।
ಮದಸೊಕ್ಕಿ ನಡೆವರ ಮಧುಪರೆಂಬುವರು ಆ
ಮಧುಪರಿಗೆ ಕಿತವನೆಂದೆವೈಸೆ ಮಧುಪ ॥ ೭ ॥

ಚಂದದ ಸುಗಂಧದ ಇಂದಿರೇಶಹಯವದನನ
ನಂದಗೋಪಕುಮಾರನ ಎಂದು ಕಾಂಬೆವೊ ಭ್ರಮರ
– – – – – – – – – – – – – – –
– – – – – – – – – – – – – – – – ॥ ೮ ॥

– – – – – – – – – – – – – – – –
– – – – – – – – – – – – – – – –
ಹಯವದನನ ದಯಾಪರನ ಪಾರಾಯಣನ
ಪ್ರಿಯನ ಯದುಕುಲರಾಯನ ತೋರೆ ॥ ೯ ॥

*

ಮಯಪುತ್ರನ ಕಳಿಸುವಾಗ ಭುವನಮೋಹನವೆನಿಪ
ಸ್ತ್ರೀಯರ ಮೂರುಬಗೆಯ ಹಿಂಡು ಪುಟ್ಟಿತು ಗಡ ।
ಬಯಸಿದಾಗ ಪೋಪುದೊಂದು ಕಾಮನುಬ್ಬಿಗೆ ಪೋಪುದೊಂದು
ಸ್ತ್ರೀಯರ ಮರುಳು ಮಾಡಿ ಒಲಿಸಿಕೊಂಬುದೊಂದು ॥ ೧ ॥

ಸ್ವೈರಿಣಿಯರೊಂದು ಗಣವು ಕಾಮಿನಿಯರೊಂದು ಗಣವು
ನಿರುತ ಪುಂಶ್ಚಲಿಯರೊಂದು ಗಣವು ।
ಇರುವರ್ಗೆ ಭೂಮಿಬಲವೆಂಬತಳಲೋಕದಲಿ
ತರತರದಿ ದೈತ್ಯರ ಮರುಳು ಮಾಡುವರು ॥ ೨ ॥

ಕರಣಕೆ ಮದವನೀವ ಹಾಟಕವೆಂಬ ಮದ್ಯರಸವ
ಭರದಿಂದ ಕುಡಿದು ಸರ್ವೇಶ್ವರರೆಂಬರು ।
ಪೆರತೀಶ್ವರಿಲ್ಲವೆಂಬರು ಇಂತು ದುರ್ಮತಿಗಳಾಗಿ ಆ-
ಚರಿಸುವವರಿಗೆ ಅಚ್ಯುತ ಕಿತವ ಮಧುಪ ॥ ೩ ॥

ಹತ್ತುಸಾವಿರ ಮತ್ತಗಜವ ಅತ್ತಲೊತ್ತುವ ಸಂಪತ್ತಿನಿಂದು-
ನ್ಮತ್ತರಾಗಿ ಗುರುದೈವವೆತ್ತಲೆಂದರಿಯದೆ ।
ಸುತ್ತಿಸುಳಿವ ಹೀನವೃತ್ತಿಯಬಲೆಯರ
ಮೊತ್ತಕ್ಕೆ ಚಿತ್ತವಿತ್ತವರಿಗಚ್ಯುತ ಕಿತವ ಮಧುಪ ॥ ೪ ॥

ಸುರಾಪಾನವ ಮಾಡಿಮಾಡಿ ದುರಾಚಾರಕಂಜದೆ ನಡೆವ
ದುರುಳರೊಳಗಣ ಸ್ನೇಹ ತತ್ಸಂಯೋಗವೆಂಬ ।
ಉರುತರ ಪಾಪಕ್ಕೆ ಕಾರಣ ದುರಿತಕತಿ ದೂರನೆನಿಪ
ಹರಿ ಕಿತವರೊಡನೆ ಒಪ್ಪುವುದೆ ವಿಹಿತವೆ ಮಧುಪ ॥ ೫ ॥

ಸಿರಿಗೊಲಿದ ವಿಧಿಗೊಲಿದ ಗರುಡಶೇಷರಿಗೊಲಿದ
ಹರಿಗೊಲಿದ ಸುರಪ ನಾರದರಿಗೊಲಿದ ।
ಕರಿಗೊಲಿದ ಧ್ರುವ ವಿಭೀಷಣ ಪ್ರಹ್ಲಾದರಿಗೊಲಿದ
ಅರಿಯದೆ ನಮಗೆ ಕೃಪೆಯಿಂದೊಲಿದ ಮಧುಪ ॥ ೬ ॥

ಕಚ್ಚಬಂದ ಕಾಳಿಯ ಗೆಲಿದು ನಿಚ್ಚಟಭಕ್ತನ ಮಾಡಿದ
ಕಿಚ್ಚನುಂಗಿ ಮೆಚ್ಚಿದ ಗೋಪರ ಸಲಹಿದ ।
ಹೆಚ್ಚಿದಗಿರಿಯನೆತ್ತಿ ಪೊರೆದ ಸುಚರಿತನೆನಿಪ ನ
ಮ್ಮಚ್ಯುತನ ಕಿತವನೆಂಬವ ಹುಚ್ಚನಲ್ಲವೆ ಮಧುಪ ॥ ೭ ॥

ಅಲಸದೆ ಮಧುರೆಗೆ ಪೋಗಿ ಸುಲಭಹಯವದನನಾದ
ಚೆಲುವ ಶ್ರೀಕೃಷ್ಣನ ತಂದೆಮ್ಮನುಳುಹಬೇಕೋ ಮಧುಪ ॥ ೮ ॥
*
ಮಧುರೆಯ ಮಾನಿನಿಯರ ಪ್ರಸಾದ ಕೊಳಲೆಂದು ನಾವು ವಿ–
ನೋದದಿಂದಂದ ಮಾತಿಗೆ ಕೃಷ್ಣ ನೋಯಬಾರದು ।
ಇದನು ಬುಧರಿಗೆ ಸಮ್ಮತ ಮಾಡುವ ನಮ್ಮ ಪ್ರೌಢಿಗೆ
ಮದನಪಿತ ಮೆಚ್ಚುವುದಾಶ್ಚರ್ಯವಲ್ಲವೆಲೆ ಮಧುಪ ॥ ೧ ॥

ಒಮ್ಮೆ ತನ್ನ ಪ್ರತಿಮೆಯಲ್ಲಿ ತನಗಿತ್ತ ಭೋಜ್ಯವನು ಮ–
ತ್ತೊಮ್ಮನದಿ ತಮ್ಮ ತಮ್ಮ ಹೃದಯದಲ್ಲಿ ।
ಸುಮ್ಮಾನದಿಂದವರು ತನಗೀಯಲು ತಾನವರ
ಸಮ್ಮುಖದಿಂದ ಸ್ವೀಕರಿಪನೆಲೆ ಮಧುಪ ॥ ೨ ॥

ಪ್ರಾಣಾಗ್ನಿಹೋತ್ರವೆಂಬ ಹೋಮ ತನ್ನಯಜ್ಞಗಡ
ಮಾನವರೊಮ್ಮೊಮ್ಮೆ ಉಂಡ ಶೇಷನವ ।
ಧ್ಯಾನಿಸುತ ತನಗೀಯಲು ತುತ್ತು ತುತ್ತು ಉಂಬಕೃಷ್ಣಗೆ
ಹೀನವಲ್ಲ ನಾವೆಂದ ನುಡಿ ಕೇಳು ಮಧುಪ ॥ ೩ ॥

ಅದಂತಿರಲಿ ನಿಮ್ಮ ಕೃಷ್ಣ ರಮಿಸುವಾಗ ನಮ್ಮಧರ
ಸುಧೆಗಳನು ತಾ ಸವಿದುಕೊಳ್ಳನೆ ।
ಅದರಿಂದ ಮಾನಿನಿಯರ ಪ್ರಸಾದವ ಕೊಳಲೆಂದು ನಾವು ವಿ–
ನೋದದಿಂದೆಂದ ಮಾತಿಗೆ ನೊಂದುಕೊಂಬರೆ ಮಧುಪ ॥ ೪ ॥

ಎಲ್ಲರುಂಬಕ್ಕಿ ಬತ್ತ ಇಲಿ ಹೆಗ್ಗಣದೆಂಜಲಲ್ಲವೆ
ಎಲ್ಲರು ಸವಿಯುವ ಪಾಲು ಕರುವಿನೆಂಜಲು ।
ಬಲ್ಲರ್ಗೆ ಬೇಕಾದ ಮಧು ಜೇನ್ನೊಣಗಳ ಹೊಟ್ಟೆ
ಯಲ್ಲಿ ತುಂಬಿರ್ದ ರಸವಲ್ಲವೆ ಕೇಳು ಮಧುಪ ॥ ೫ ॥

ಲೋಕಕ್ಕೆ ಬೇಕಾದ ವರವಕೊಡುವಶ್ವತ್ಥ
ಕಾಕವಿಷ್ಟದಿ ಪುಟ್ಟಿತೆಂಬರು ಬುಧರು ।
ತಾ ಕಲ್ಪಿಸಿದ ಕಲ್ಪನೆಗಳೆಲ್ಲಿ ತಪ್ಪದೆಂದು
ಶ್ರೀಕೃಷ್ಣ ಮಾಡಿರ್ದ ಮರಿಯಾದೆ ಮಧುಪ ॥ ೬ ॥

ವಹಪ್ರಾಪಣೆಯೆಂಬ ಧಾತು ವೈಯಾಕರಣವೆಂಬ ತನ್ನ
ಸಹಜ ಪ್ರಸಾದವನು ಮಧುರಾಪುರದ ।
ಲಿಹ ಮಾನಿನಿಯರಿಗೆ ವಿಧಿಸಲೆಂದೆವೈಸೆ ಮನದಿ
ಕುಹಕವಿಟ್ಟುಕೊಂಡು ನುಡಿದ ಮಾತಿದಲ್ಲ ಮಧುಪ ॥ ೭ ॥

ನಮ್ಮನ್ನು ಕರುಣದಿಂದ ಪೊರೆದಂತೆ ಮಧುರೆಯಲಿ
ಇಮ್ಮನವ ಮಾಡದೆ ಮಧುರೆಯ ಸತಿಯರ
ಕರ್ಮಬಂಧವ ಪರಿದು ಮುಕ್ತಿಯನೀವ ಪ್ರಸಾದ–
ವಂ ಮಾಡಿ ಸಲಹಲೆಂದೆವೈಸೆ ಮಧುಪ ॥ ೮ ॥

ಒಬ್ಬ ಸೈರಂಧ್ರಿಯವಳು ಪೂರ್ವದಿ ಮಾಡಿದ ಪುಣ್ಯ
ದುಬ್ಬರದಿಒಲಿದು ಮತ್ತೊಬ್ಬ ವಧುವ ।
ಹುಬ್ಬಿಕ್ಕಿ ನೋಡದವ ಮಾನಿನಿಯರ ಪ್ರಸಾದವನು
ಕೊಬ್ಬಿ ಕೊಳಲೆಂದ ಮಾತು ಕೂಡುವುದೆ ಮಧುಪ ॥ ೯ ॥

ಹುಸಿಗೆ ಹೇಸದವರ ರಸನದಿ ಬಿಸಿನೀರ ಹನಿಸಿ ಮತ್ತೆ
ಸೀಸವ ಕಾಸಿ ಪುಸಿಯನುಸುರುವ ಮನುಜರ ।
ಘಾಸಿಯ ಮಾಡಿ ಬೇಸರಿಸುವರೀಸಮಯದ ದಾಸರು ಗಡ
ಲೇಸಿನ ಮೇಲೆ ಆಸೆಯುಳ್ಳವ ಮೋಸಹೋಹನೆ ಮಧುಪ ॥ ೧೦ ॥

ವಂದ್ಯ ಹಯವದನ ನಂದನಕಂದ ಬಂದು
ಹೊಂದಿದ ಮಂದಿಯನ್ನು ಎಂದೆಂದು ಸಲಹುವ ॥ ೧೧ ॥

*

ಒಮ್ಮೆ ತನ್ನಧರಸುಧೆಯ ನೂಡಿ ಮ
ತ್ತಿಮ್ಮನವ ಮಾಡಿ ಮಧುರೆಯ ಸತಿಯರ ।
ನಿಮ್ಮರಸ ನೊಲಿಸುವನು ಹೊಸ ಹೊಸ ಕುಸುಮಗಳಲಿ
ಸುಮಾನದಿಂದ ಸುಳಿವವನ ಸಖನಲ್ಲವೆ ॥ ೧ ॥

ಹರವಿರಿಂಚಾದಿ ಸುರನಿಕರ ಕೊಂಡಾಡುತಿರೆ
ಪರಮಪಾವನ ಕೀರ್ತಿಯುಳ್ಳ ಹರಿಯ ।
ಸರಸೋಕ್ತಿಗೆ ಮರುಳಾಗಿ ಸಿರಿಯವನ ಪಾದಪದ್ಮ
ಪರಿಚಾರಕಳಂತಿಹಳು ಕೇಳು ಮಧುಪ ॥ ೨ ॥

ಮಾರನಯ್ಯನ ನೀ ತಾರದೆ ಬಹರೆ
ಹಾರ ಮನೋಹರನ ನೀ ತಾರದೆ ಬಹರೆ ।
ವಾರಣವರದನ ನೀ ತಾರದೆ ಬಹರೆ
ವೀರ ಹಯವದನನ ನೀ ತಾರದೆ ಬಹರೆ ॥ ೩ ॥
*
ಆರು ಪದದಲಿ ನೆಲನನೂರಿ ಬಹ ಚಂಚಲನು
ಚಾರುವಾಕರಿಗೆ ಗುರುತಪ್ಪದಿವನು ।
ಆರ ಭಂಗಿಸಬಂದೆ ಪುರದ ನಾರಿಯರಿಂದ
ಪೂರೈಸಿಕೊಳಲಿ ತನ್ನಯ ಬಯಕೆಯ ॥ ೧ ॥

ಗ್ರಹಗತಿಯಿದೆಲೆ ನೀ ತುಂಬಿ ತನ್ನ ಸಂಭ್ರಮ ಗರು
ಹವಿಲ್ಲದವರಿಗರುಹಲೇತಕೆ ।
ಅಹಿತನರಸು ಪುರದರಸನಾದ ಮುರಹರನ
ಮಹಿಮೆಯನು ಪುರದ ಸತಿಯರಿಗರುಹಲಿ ॥ ೨ ॥

ಸಿರಿಯವನ ಬಿಗಿದಪ್ಪಿ ಕುಚದ ಬೇಸರ ಕಳೆದು
ಹರುಷವಾರಿಧಿಯೊಳೋಲಾಡುವಳ ।
ನರಸಖನ ಸಖಿಯರವರಿಂದ ಒಲಿಸಲಿ ಭೃಂಗ
ವಿರಹದಿಂದ ನೊಂದವರಿಂದೇನು ಫಲವು ॥ ೩ ॥

ಕಂಜಲೋಚನ ಬಾರನೆ
ಮಂಜುಭಾಷಣ ಬಾರನೆ
ಅಂಜನವರ್ಣ ಬಾರನೆ ನಿ–
ರಂಜನ ಹಯವದನ ಬಾರನೆ ॥ ೪ ॥
*

ಹರಿಯ ಕಪಟದ ನೋಟಕೆರಗದಂಗನೆಯರನು
ಚರಾಚರರೊಳಗಾವು ಕಾಣೆವಮ್ಮ ।
ಸ್ಮರನ ಪೆತ್ತ ಮಹಾಲಕುಮಿ ಚಂಚಲತೆಯನು
ತೊರೆದಿವನ ಚರಣಸೇವೆಯ ಮಾಳ್ಪಳು ॥ ೧ ॥

ಹೀನಾರ್ಥವಧಿಕಸಾಧನವೆಂಬ ಗೋವಳ ನಮ್ಮ
ತಾನು ಬಿಟ್ಟರೆ ತನ್ನ ಪುಣ್ಯನಾಮವಿ ।
ದೀಗಪಕ್ಷವು ಬಿಡದು ನಿನ್ನ ಚೆ–
ನ್ನಿಗ ನಮಗೆ ಹಾನಿಯ ಕೊಡದು ಹೆಸರು ಬಿಡದು ॥ ೨ ॥

ಕಪಟನೋಟದವನೆಂದ ನುಡಿಯಿಂದ ಕೃಷ್ಣಗೆ ನಾವು
ಅಪರಾಧಿಗಳೆಂದು ಬಗೆಯದಿರು ಭೃಂಗ ।
ಕಪಟ ಸುಖವನೆ ಪೇಳ್ದ ಪಟಿಗ ತಾವೆಂಬರು
ಶ್ರೀಪತಿ ಮುಕ್ತಿ ಸುಖವಹನೆಂದೆವ್ಯೆಸೆ ॥ ೩ ॥

ಜಿನನೆಂಬೊ ದಿತಿಜ ವೇದವನೋದಿ ಯಜ್ಞಕರ್ಮ
ವನು ಮಾಡಲವಗೆ ಕುಮತಿಯ ಕೊಡಲು ।
ಅನುವಾಗಿ ತೊಟ್ಟಿಲೊಳು ಮಲಗಿರ್ದ ಬುದ್ಧದೇವ
ಧ್ವನಿಗೂಡಿ ನುಡಿದ ನಗೆ ಕಪಟನಗೆ ಮಧುಪ ॥ ೪ ॥

ಯಾಕೆ ನಗೆಯೆನಲು ವಿವೇಕಿಯಂತೆ ಮಾತನಾಡಿ
ಆ ಕುಜನರೆಲ್ಲ ನಡೆದ ಸುಮಾರ್ಗವ ।
ನೀಕರಿಸಿ ಶ್ರುತಿಮತವ ಜರೆದು ದುರ್ಮತವ ಕಲಿಸಿ–
ದ ಕೃಷ್ಣನ ಮುಗುಳುನಗೆ ಕಪಟನಗೆ ಮಧುಪ ॥ ೫ ॥

ನಾರದ ಮುನೀಂದ್ರ ಬಂದು ಸಾಲ್ವ ಸತ್ಯವ ಪೇಳೆ
ವೀರಪಾರ್ಥರ ಸಭೆಯೊಳಗೆ ಕುಳ್ಳಿರ್ದ ।
ಧೀರ ಕೃಷ್ಣನ ಮಂದಹಾಸವೆ ಸಾಲ್ವನ ಕುಲಕುಠಾರ
ವಾಯ್ತಿವನ ನಗೆ ಕಪಟನಗೆ ಮಧುಪ ॥ ೬ ॥

ತನ್ನವರಿಗಖಿಳಸಂಪದವೀವುದು ಸುಗುಣ ಸಂ
ಪನ್ನಕೃಷ್ಣನ ಮುದ್ದುಮೊಗದ ಮಂದಹಾಸ ।
ಅನ್ಯಜನರ್ಗೆದೆಶೂಲವವನ ಮನೆಯನೆ ಕೊಂಬುದು
ನಿನ್ನಾಣೆ ಪುಸಿಯಲ್ಲ ಬಲ್ಲೆವವನ ಬಗೆಯ ॥ ೭ ॥

ನಲ್ಲನಿಲ್ಲದ ಸತಿ ಚೆಲುವಿದ್ದು ಫಲವೇನು
ಬಲ್ಲವರಿಲ್ಲದ ಸಭೆಯಿದ್ದು ಫಲವೇನು ।
ಸಲ್ಲದ ಫಲಗಳಿಗೆ ಸವಿಯಿದ್ದು ಫಲವೇನು ನಮ್ಮ
ನೊಲ್ಲದ ಹರಿ ಹಯವದನ ತಾನೆಲ್ಲಿದ್ದರೇನು ॥ ೮ ॥

ಅವನ ಕಂಗಳ ನೋಟ ನೆನೆಯಿಪ ತ–
ನ್ನವನಟ್ಟಿದ ಯಾದವನ್ಯಾಕೆ ಬಾರ ।
ಶಿವನಿಂ ಬೆಂದವನಪೆತ್ತವನ ತಮ್ಮವನೆಂದು ಮಾಧ
ವನ ನಂಬಿದೆವು ನಮ್ಮ ಜವನಿಗೊಪ್ಪಿಸಿದ ॥ ೯ ॥

ಭುವನಪಾವನ ಪುಣ್ಯಸ್ತವನ ಪ್ರಿಯಹಯವದನ ।
ನಿವನುಕಿತವನಲ್ಲಬಿಡು ಬಿಡು ನವನಾರಿಪ್ರಿಯನ ॥ ೧೦ ॥
*
ತಲೆಯ ಮೇಲಿಟ್ಟು ನಮ್ಮ ಚರಣವಿಡಿಯಲು ಭೃಂಗ
ಬಲು ಚಾಟಗಾರತನವನೆ ತೋರಿದ ।
ಫಲವೇನು ನಿನ್ನೊಡನೆ ಕೊಲೆಗಾರನಲ್ಲವೆ ಅವ
ನೊಳು ದೌತ್ಯವನು ಮಾಡು ಪೋಗು ಪುರಿಗೆ ॥ ೧ ॥

ತನಗಾಗಿ ಮನೆಯ ಬಿಟ್ಟೆವು ಪತಿಯನಗಲಿದೆವು
ತನಯರ ಮರೆದು ಲೋಕವ ಜರೆದೆವು ।
ಕನಸುಕಂಡಂತಾಯ್ತು ಕೃತಘ್ನನಲ್ಲವೆ ನಮ್ಮ
ವನದೊಳು ಬಿಸುಟನವನೊಳು ಸಂಧಿಯೆ ॥ ೨ ॥

ಸಕಲಗುಣ ಸಂಪನ್ನನಾದ ಕೃಷ್ಣಗೆ ನಾವು
ಅಕೃತವೇತ್ತನೆಂದೆವೆಂದು ಚಂದವು ಕುಂದದು ।
ಅಕೃತವೇ ವೇದ ಗಡ ಕೃತಕವಾಮುಕುತಿ ಗಡ
ಅಕೃತವ್ಯಾಕೃತಾಕಾಶವಿಂತಿದ ಬಲ್ಲನಲ್ಲವೆ ॥ ೩ ॥

ಅಣುರೇಣು ತೃಣಕಾಷ್ಠದೊಳಗೆ ತುಂಬಿಹ ಕರುಣ
ಚರಣವಿಟ್ಟರು ನೊಂದುಕೊಳನು ಭೃಂಗ ।
ಮುನಿದು ನಾವೆಂದ ಮಾತವನ ತಟ್ಟದು ಸಿರಿರ
ಮಣಿಯ ತನ್ನೆದೆಯ ಮ್ಯಾಲಿಟ್ಟಪನಲ್ಲ ॥ ೪ ॥

ಅವನ ಮೇಲೆ ಮಲಗಬೇಕವನ ಮೇಲೆ ಕುಳ್ಳಿರ ಬೇ
ಕವನಿವನೆಲ್ಲ ಜನನಿಯಂತೆ ತಾಳಿಕೊಂಬ ।
ಅವ ಸರ್ವಗನಲ್ಲವೆಂದು ಕಲಿಯ ಮುಖದಲಿ ನೆನೆದು
ಸುವಿವೇಕವುಳ್ಳವರು ಮನವನೆ ಬಿಡುವರು ॥ ೫ ॥

ಮೆಟ್ಟಿದರೆ ವಿಷ್ಟವನು ಮಾಡಿದರೆ ತನ್ನಯ ಮಲವ
ಬಿಟ್ಟರೆಂಜಲುಪುಲ್ಲಿಗೆಯನಿಟ್ಟರೆ ಕೆರೆದರೂ
ಸುಟ್ಟರೂ ತಾಳಿಕೊಂಬ ಸರ್ವಂಸಹೆಯೆಂಬ ಭೂಮಿ ತನ್ನ
ಪಟ್ಟದರಸಿಯವಳಷ್ಟು ವಿಠಲ ತಾಳಿಕೊಳನೆ ॥ ೬ ॥

ಕೊಲೆಗಾರನೆಂದೆವೆಂದು ನೋವು ಸಲ್ಲದು ಭೃಂಗ
ಒಲಿಸದಿರೆ ಕೊಲೆಗಾರನೆಂದೆವ್ಯೆಸೆ ।
ಒಲಿಯಲೊಲ್ಲದೆ ದ್ವೇಷಿಪ ದಿತಿಸುತರ ಹಿಂಡುಗಳಿಗೆ
ಕೊಲೆಗಾರನೆಂಬುದು ಹರಿಬಿರುದಲ್ಲವೆ ಮಧುಪ ॥ ೭ ॥

ಅತ್ತ ಚರಾಚರಗ್ರಹಣ ವಧವೆಂದು ತಾನೆ ಪೇಳಿದ
ಅರ್ಥಿಂ ಹಂತಿ ಸರ್ವಂಹಂತಿಯೆಂಬ ತನ್ನ ।
ಭಕ್ತರ ಭವಾರ್ಥಿಯನು ಕಿತ್ತು ಮುಕ್ತಿಯನಿತ್ತು ತನ್ನ
ಹತ್ತಿರೆ ನಿತ್ಯಸುಖವೀವನು ಕೊಲೆ ಹೀನವಲ್ಲವೆ ಮಧುಪ ॥ ೮ ॥

ಬೆಂದ ಈ ಸಂಸಾರವೆಂಬ ವನದೊಳಗೆ ಬೆಂದು
ಬೆಂದು ನೊಂದು ತನ್ನ ಹೊಂದಿದವರ
ಇಂದಿರೇಶನೆ ಇನ್ನು ಇವರ ಕೆಡಿಸದೆ ಮಧುಪ
ಎಂದೆಂದವನ ಭಕ್ತವೃಂದ ಚಂದವಲ್ಲವೆ ॥ ೯ ॥

ಕೈಗೆ ಸೇರಿದ ವಿತ್ತ ಹೋದಮ್ಯಾಲದನೆ ಆ–
ವಾಗ ನೆನೆನೆನೆದು ಹಲುಬುವನ ತೆರದಿ ।
ಆಗಮವೆನಿಪ ಹರಿಚರಿತವನೆ ಅನವರತ ಅನುರಾಗದಿ
ಂದ ನೆನೆಯುತಿಪ್ಪುದು ಸಂಧಿಯಲ್ಲವೆ ॥ ೧೦ ॥

ಶ್ರುತಿಯ ಬಿಟ್ಟ ಕಥನಕ ಬಾಳು ಗೋಳಲ್ಲವೆ
ವ್ರತವ ಬಿಟ್ಟ ಯತಿಗಳ ಬಾಳು ಗೋಳಲ್ಲವೆ ।
ಪಥವ ಬಿಟ್ಟ ಪಥಿಕನ ಬಾಳು ಗೋಳಲ್ಲವೆ ಹಯವದನ ಶ್ರೀ–
ಪತಿಯ ಬಿಟ್ಟರೆಮ್ಮ ಮನದ ರತಿಯು ಗೋಳಲ್ಲವೆ ॥ ೧೧ ॥
*
ಬಲಿಯ ಬಿಲದೊಳಗಿಟ್ಟ ಕಪಿಗೆ ಬಾಣವ ತೊಟ್ಟ
ಒಲಿದು ಬಂದವಳ ಮೂಗ ತರಿದುಬಿಟ್ಟ ॥
ಚಲದಂಕಮಲ್ಲ ವೇದವಿದ್ವರ್ಗವಂದ್ಯ ಗಡ
ಅಳಿ ನಮಗೆ ಬದ್ಧನೊಳು ಸಖ್ಯ ಸಲ್ಲ ॥ ೧ ॥

ಸ್ವಕೃತಪತಿ ಪೋದಮೇಲುಪಪತಿಗಳುಪಿದ ಪಾತಕದ
ಮಾಯಾಂಗನೆಯ ಮೆಚ್ಚ ನಮ್ಮ ।
ಶಕುತಿಯಿಂದ ನೆರೆ ಸಿರಿಯನಪಹರಿಸೆ ಮುನಿಯಲವ
ಸುಕೃತಿಗಳ ದೇವ ದುಷ್ಕೃತವ ತಾಳ ॥ ೨ ॥

ಇಂದ್ರನಿಗೆ ಸಲುವ ರಾಜ್ಯವ ತನ್ನ ಬಾಹುಬಲ
ದಿಂದ ಸೆಳಕೊಂಡು ಆಳಿದ ಬಲಿಯನು ।
ಇಂದಿರೇಶನೆ ಇನ್ನು ಇವನ ಕೆಡಿಸದೆ ಮಧುಪ
ಮುಂದೆ ದೇವೆಂದ್ರಪಟ್ಟವಗಟ್ಟಿದ ॥ ೩ ॥

ತನ್ನ ತಮ್ಮನ ವಧುವ ತಾನೆ ಮದದಿಂದ ಸೊಕ್ಕಿ
ಪುಣ್ಯಕರ್ಮವ ಬಿಟ್ಟು ಪಾಪಕಂಜದೆ ।
ಮನ್ನಬಂದಂತೆ ರಮಿಸುವ ಕಪಿಗೆ ನಮ್ಮ ರಾಮ
ಸನ್ಮಾರ್ಗದೊಡೆಯ ಶಿಕ್ಷಿಸದೆ ಬಿಡ ಮಧುಪ ॥ ೪ ॥

ಕಾಮನೆಂಬ ಯಾನವೇರಿ ಕಂಡಕಂಡ ಮನುಜರ
ಕಾಮಿಸಿಯವರ ಕೆಡಿಸಿ ತಾನೆ ಕೆಡುವ ।
ನೇಮವಿಲ್ಲದ ಹೀನಕಾಮಿನಿಯರೊಳು ಮಧುಪ
ಸೀಮೆಯ ನಿಲಿಸಬಂದ ರಾಮ ತಾಳ್ವನೆ ಮಧುಪ ॥ ೫ ॥

ವಿರಿಂಚನಿಗೆ ಗುರುವೆನಿಪ ಹರಿ[ಯ]ಕಿರಾತನೆಂದು
ದುರುಕ್ತಿಯಿಂದ ಕರೆವರೆ ಮರುಳರಲ್ಲ ಮಧುಪ ।
ನಿರುತ ಸುಖವುಳ್ಳ ಮುಕುತಿಯಿವನ ಪೇಳ್ವರು
ಪೊರೆವ ಹರಿಗೆ ಕಿರಾತನೆಂತೊಪ್ಪುದೊ ಮಧುಪ ॥ ೬ ॥

ಕಪ್ಪುವರ್ಣದ ಕೃಷ್ಣ ಅಸಿತನೆಂದು ನುಡಿದರದು
ತಪ್ಪಲ್ಲ ಬಂಧನೆಯೆಂಬ ಧಾತುವಿನಿಂದ ।
ತಪ್ಪಿಸಿ ಭವಬಂಧನವ ಶೋಭಿಪ ಮುಕ್ತಿಯೀವ
ಗಪ್ಪುದೆ ಬುಧರಮತದಿಂದ ಮಧುಪ ॥ ೭ ॥

ಇದನೆ ಮನದೊಳಗಿಟ್ಟು ಬದ್ಧನೆಂದೆವು ನಾವು
ಸದಮಲಚರಿತ ಹರಿಯ ಮೆಚ್ಚಿದವರ ।
ವದನವೆಂದೆಂದವನ ಸದುಗುಣವ ನೆನೆವುದು
ಅಧಮ ಜನರಂತೆ ಅವಗುಣವ ನೆನೆಯದು ॥ ೮ ॥

ಒಮ್ಮೆ ತನ್ನೊಳು ಸಖ್ಯವಾದುದೆ ಸಾಕು ನಮಗೆ
ಹಮ್ಮು ಬಂದದರಿಂದ ಹರಿ ಬಿಟ್ಟನು ।
ನಿರ್ಮಲಕಥಾಮೃತವ ಸವಿದು ತುತಿಪ್ಪುದೆ ಸಾಕು
ತನ್ಮಹಿಮೆ ಅರಿಯದಬಲರ್ಗೆ ಮಧುಪ ॥ ೯ ॥

ನಮ್ಮ ನಲ್ಲನಿಗೆ ಸರಿಯಾರು ಕೆಳದಿ
ನಮ್ಮ ನಲ್ಲನಂಥ ಚೆಲುವನ್ಯಾರು ಕೆಳದಿ ।
ನಮ್ಮ ನಲ್ಲನಂಥ ಸೊಬಗನ್ಯಾರು ಕೆಳದಿ
ನಮ್ಮನಾಳ್ವ ಹಯವದನ ಶ್ರೀಹರಿಯ ॥ ೧೦ ॥
*

ವಿಠಲರಾಯ ನಮ್ಮ ಬಿಟ್ಟ್ಹೋದನ್ಯಾಕೊ ಭ್ರಮರ ಕಂಗೆಟ್ಟ
ವನ ತುತಿಸಿ ಮನನಿಷ್ಠೆಯಿಂದೊಲಿಸಲು
ಇಷ್ಟಂಗಳೆಲ್ಲ ಇಲ್ಲಿ ಕೊಟ್ಟು ಕಾಯಿದೆ ವೃಥಾ । ಪ ।

ಬಾಯೆನಲು ಬಂದು ಬಂದು ಹೋಗೆನಲು ಹೋಗಿ ಹೋಗಿ
ವಾಯುದೇವರ ಮತ ಮನ್ನಿಸುವುದು ತನ್ನ ।
ರಾಯತನಕೆ ಸಾಕೆ ಸಾಕಾದಾರಾಯಿತೆ ನಮ್ಮ
ಕಾಯಲೋಸುಗ ಹೆತ್ತತಾಯ ಮನೆಗ್ಯಾಕೆ ಬಾರ ॥ ೧ ॥

ಕಟ್ಟೆ ಕಾಲಿಂದ ಮೆಟ್ಟಿ ಗೊಲ್ಲರೆಬ್ಬಟ್ಟಿ ತಾ-
ನಿಟ್ಟ ಮುಕುಟ ಪೋಗೆ ಕಟ್ಟಾಳುಮಾಡಿಸಿದ ।
ದುಷ್ಟಂಬಲೆಸೆಯಲು ದುಷ್ಟೋಕ್ತಿಯಾಡಲು ಬಲು
ಬೆಟ್ಟವ ಹೊರಿಸಲು ಸಿಟ್ಟಿಲ್ಲದವನೀಗ ॥ ೨ ॥

ಅಧದೇಹವನೊಬ್ಬ ಹೆಣ್ಣಿಗೆ ಕೊಟ್ಟ ತನ್ನ
ಮುದ್ದು ಬಾಯೊಳಗೊಬ್ಬ ಹೆಣ್ಣ ಬಚ್ಚಿಟ್ಟುಕೊಂಡ ।
ಕದ್ದು ಮುನಿಯ ಹೆಣ್ಣ ಹೊದ್ದಿದನೊಬ್ಬ ನಿರ
ವದ್ಯ ಶ್ರೀಕೃಷ್ಣನೆಮ್ಮೊಳಿದ್ದರೆ ಭಯ ಉಂಟೆ ॥ ೩ ॥

ಕರಿಯು ಮೊರೆಯಿಡೆ ನಾರಿಯರು ತ್ರಾಹಿಯೆನ್ನೆ ಉತ್ತರೆಯು
ಸಾರಲು ಮುರಾರಿಯು ಕಾಯನೆ ದ ।
ರಿಯ ಭೂದೇವಿಯ ಹೊರೆಯ ಬಿಡಿಸನೆ
ಹರಿ ಉದ್ಧವನೆ ನಾರಿಯರ ಪೊರೆಯದೆ ಬಿಡುವನೆ ॥ ೪ ॥

ಹಯವದನ ಕಂಜನಯನ ಶ್ರೀಯಿಂದಲಿ ನೀನು
ದಯವಾಗಲು ಗಡ ನ್ಯಾಯಕೋವಿದ ಭಕ್ತ- ।
ಭಯಭಂಜನ್ನ ಲಕುಮಿಪ್ರಿಯ ಇಂದೆಮ್ಮೊಳುಪೇ-
ಕ್ಷೆಯ ಮಾಡುವರೆ ॥ ೫ ॥
*
ಅವನ ಚರಿತಾಮೃತದ ಬಿಂದು ಕರ್ಣಕೆ ಬೀಳೆ
ಭವನಸುತವನಿತಾದಿಗಳನೆ ಬಿಸುಟು ।
ಅವನಿಯೊಳು ಭಿಕ್ಷುಚರ್ಯವನೆ ಚರಿಸುವರು ಗಡ

ಅವನ ಕತೆಗಳ ಕೇಳದವನಾವನೋ ॥ ೧ ॥

ಪರೀಕ್ಷಿತನೆಂಬೊ ರಾಯನೊಬ್ಬ ತೊರೆದು ನಿಜಸಂಪದವ
ವರಮುನೀಶ್ವರ ಸಭೆಯೊಳಗೆ ಮಥಿಸಿ ।
ಸರಸ ಶುಕಮುಖದಿಂದ ಹರಿಕಥೆಯ ಕೇಳಿ ಸವಿಸಿ
ಪರಲೋಕವನೆ ಸಾಧಿಸಿದನೆಂಬರು ॥ ೨ ॥

ಸಕಲವೇದ ಪಾರಾಯಣದಿ ಸಂತತ ನಿರತರಾದ
ಸುಕೃತ ನಿಧಿಗಳಾದ ಸನಕಾದಿಯೋಗಿಗಳು ।
ಶ್ರೀಕೃಷ್ಣನ ಚರಿತ್ರೆಯನು ಶ್ರುತಿಸ್ಮೃತಿಗಳಿಂದ ಬಣ್ಣಿಸೆ
ಸುಖಿಸದನಾವನು ಹರಿಕಥೆಯ ಕೇಳಿ ॥ ೩ ॥
*
ಎಂದೊಡನಾಡುವೆ ಎಂದು ಕೊಂಡಾಡುವೆ
ಎಂದು ಹಯವದನನ ಹೊಂದಿ ಮುದ್ದಾಡುವೆ ॥ ೪ ॥
*
ಗಂಟೆಯ ಬೇಟೆಗಾರನ ಕುಟಿಲಸ್ವರಕ್ಕೆ
ಅಂಟಣಿಸಿ ಬಂದು ಬಳಲುವ ಮೃಗಂಗಳ ।
ನೆಂಟರಾದೆವು ನಾವು ಅವನ ನಖ ನಮ್ಮ ಕುಚಕ್ಕೆ
ಕಂಟಕವಾಯಿತು ಪೇಳು ನೆರೆ ವಾರ್ತೆಯ ॥ ೧ ॥

ಸೈರಂಧ್ರಿಗೆ ಸಂಧಿಯ ನಡೆಸಿದ ಕಪಟಿಯೊ ನಮ್ಮ-
ನಾರಯ್ಯ ಬಂದನು ಕರುಳನೆ ತೊಳೆಯಲು ।
ಧೀರನಿವನೆಲ್ಲಿಂದ ಬಂದನೋ ಎಂಬುದ ವಿಚಾರಿಸಲು
ನಾರಿ ಇವನು ಆರವನೋ ನೆಚ್ಚಬಾರದು ॥ ೨ ॥

ನೊಂದು ನಾವೆಂದಮಾತಿಗೆ ನೋವು ಸಲ್ಲದು
ನಂದಂತಿ ಕಮುಕಿಮೆಂದು ಮುಕುಂದನಾರು ನಿಂದಿಪರು ।
ಚಂದದ ಹರಿಗುಣಗಳ ವೃಂದವ ವಿಚಾರಿಸಲು
ಒಂದು ಶಬ್ದ ಮತ್ತೊಂದು ಪೇಳದೆಂದು ಶ್ರುತಿಮತ ॥ ೩ ॥

ದುಃಖಿ ಬದ್ಧ ನೀಚನೆಂದು ನುಡಿದರೆಯು ನಮ್ಮ ಕೃಷ್ಣಗೆ
ದುಃಖಯತಿ ಬದ್ಧಯತಿ ನೀಚಯತಿ ಎಂಬರ್ಥವ

ತರ್ಕಕೋವಿದ ವ್ಯಾಸರನುಮತದಿ ಶ್ರುತಿ ಪೊಗಳೆ
ದುಷ್ಕೃತದೂರನಿಗೆ ದೋಷವಾರು ನುಡಿವರೊ ॥ ೪ ॥
*
ಸುರರಸುರರ್ವೆರಸಿಪ್ಪ ವಿರಿಂಚಿಯ ಮುದ್ದುನುಡಿಯು–
ಸುರುವ ಜಿಹ್ವೆಗೆ ಸಿರಿಯೀವ ನುಡಿಗಳ ।
ಖರೆಯೆಂದು ನಾವು ಧರೆಗೆ ಬಂದೆವದರಿಂದ
ಅರಿಯದವರಾಗಿ ಹರಿಯ ವಧುಗಳಾದೆವು ॥ ೧ ॥

ಮೆರೆವ ಉಗುರುಕುರುಹಿಂದ ತೀವ್ರವಾದ ನಮ್ಮ ಕುಚಕೆ
ಬರುತ್ತಿಪ್ಪ ಬೇಸರವ ಬೇಸರಿಸುತ ।
ಮರೆಯೊಗಲು ಕಾವನೆಂಬ ಬಿರುದುಳ್ಳ ಕೃಷ್ಣನಿಗೆ
ಹರಿಣಿಗಳವೊಲು ಕಂಡಂದೆವ್ವೆಸೆ ॥ ೨ ॥

ಇಂತು ವಯವೃತವೆಂಬ ಶ್ಲೋಕದೊಳಡಗಿಪ್ಪ
ಸಂತರ್ಮೆಚ್ಚರ್ಥಗಳನವಗೊರೆದು ಪೇಳಾ ।
ಭ್ರಾಂತರು ಮರುಳುಗೊಳಲಿಯೆನುತ ಪೇಳಿದ ಪದಕೆ ಶ್ರೀ–
ಕಾಂತ ಮೆಚ್ಚೆ ಚಿಂತಿತಾರ್ಥವ ಕೊಡಲುಬೇಕು ॥ ೩ ॥

ಇನ್ನು ಸರ್ವಜೀವರೊಳಗೆ ಭಿನ್ನನಾದ ಹರಿಯ
ಪುಣ್ಯವಾರ್ತೆಗಳ ನಮಗೊರೆದು ಪೇಳಾ ।
ಚೆನ್ನಾಗಿ ನಿನ್ನ ಮುಖದಿಂದವನ ಕತೆಗಳ ಕೇಳಿ
ಧನ್ಯರಾದೆವೆಂದೆವ್ವೆಸೆ ಮಧುಪ ॥ ೪ ॥

ಅಂಜೆನಿನ್ನು ಮದನಂಗೆ ಅಂಜೆ ಮಂದಮಾರುತಗೆ ।
ಕಂಜಾಕ್ಷ ಹಯವದನ ಸಂಜೆಗಿಲ್ಲಿ ಬರುವನಾಗಿ ॥ ೫ ॥
*
ಚಂದ್ರಕಿರಣಗಳಿಂದತಿಪೂಜ್ಯ ನೋಡೆ
ಚಂದ್ರಮಂಡಲದಂತೆ ಮುಖತೇಜ ।
ಇಂದ್ರಾದಿ ಸುರರಿಂದತಿಸೇವ್ಯ ಈಗ
ಇಂದು ಇಂದುಮುಖಿ ನೀ ಕರೆದುತಾರೆ ॥ ೧ ॥

ಸರಸಿಜನಯನ ಸನಕಾದಿವಂದ್ಯನೋಡೆ
ಸರಸಪ್ರಿಯ ಸಜ್ಜನಗೇಯ ।
ಸರಸಿಜಾಕ್ಷಿಯರ ಕಾಮಿತಕಾಯ ನಮ್ಮ ಸವತಿ
ಯರನು ಮೆಚ್ಚಿದವನಾರೆ ॥ ೨ ॥

ಕಾಮನ ಪೆತ್ತ ಕಾಮಿತದಾಯಕ ಪೋದ
ಮಾವನ ಕೊಂದು ಮಲ್ಲರ ಗೆದ್ದ ।
ದೇವಕೀನಂದನಯೆಂದು ಬಂದ ಈಗ
ಭಾವಕಿ ಕರೆದು ಬೇಗನೆ ತಾರೆ ॥ ೩ ॥

ಬಂದನಿನ್ನಾರತಿಯ ಬೇಗದಿ ತಾರೆ ಈಗ
ಚಂದದಿ ವೇದವ ತಂದವ ನೀರೆ ।
ಮಂದರಗಿರಿಯೆತ್ತಿದವನ್ಯಾರೆ ಈಗ
ಮಂದಗಮನೆ ನೀ ಕರೆದು ತಾರೆ ॥ ೪ ॥

ನಲ್ಲನುಳಿದರುಳಿವೆನು ನೀರೆ ನಮ್ಮ
ಚೆಲ್ವ ರಂಗನ ಬೇಗ ಕರೆತಾರೆ ।
ಎಲ್ಲಿಯ ಬಿಲ್ಲಹಬ್ಬವು ಬಾರೆ ಜೀವ
ತಲ್ಲಣಿಸುತಿದೆ ನಮ್ಮ ಗೊಲ್ಲನಿಲ್ಲದೆ ॥ ೫ ॥
*
ಅಚ್ಚಕೃಷ್ಣ ಬಂದೇಳು ಬಾಲೆ
ಚಚ್ಚರದಿದಿರೇಳೆ ।
ಬಚ್ಚಿಡೆ ಬೆಣ್ಣೆಯ ಬ್ಯಾಗ
ಹೆಚ್ಚಿನಾರತಿಯ ತಾರೆ ॥ ೧ ॥

ಇನ್ನೇಳೆ ಗೋಪಿಯ ಕಂದ
ಸನ್ನೆಯ ಮಾಡುತ ಬಂದ ।
ಹೊನ್ನು ತಾರೆ ಪಾದಪೂಜೆ
ಯನ್ನು ಮಾಡುವ ಬ್ಯಾಗಬಾರೆ ॥ ೨ ॥

ಮಲ್ಲರ ಮಡುಹಿ ಬಂದ
ಬಲ್ಲಿದ ಮಾವನ ಕೊಂದ ।

ಚೆಲ್ವ ಹಯವದನ ನೀ
ಲ್ಲಿದ್ದರಲ್ಲಿಗೆ ಬಂದ ॥ ೩ ॥
*
ಕುಸುಮ ವಸನ ಬರಲೆಸೆವ ಶಶಿಯ ಕಾಂತಿ ।
ಮುಸುಕಲು ಮನ್ಮಥನ್ನ ಅಸಮಶರ ತಾಕಲು ॥ ಪ ॥

ಶೃಂಗಾರರಸ ಬಸಿವ ಹೆಂಗಳ ಗಣಂಗಳೊಳು ಕರ್ಣಂಗ ।
ಳೊಳು ಪೊಕ್ಕು ಪೊಕ್ಕು ಕಂಗೆಡಿಸಿ ಕಾಡುತಿದೆ ॥ ೧ ॥

ರಂಗವಲ್ಲಿಯನಿಕ್ಕಿ ಮನೆಯ ಶೃಂಗರಿಸಿ ವಿಠಲಗೆ ।
ಮಂಗಳಾರತಿಯ ತಾರೆ ಕಂಗಳ ಹಬ್ಬವಾದೀತು ॥ ೨ ॥

ಬಂಗಾರ ಸರ್ವಾಂಗಕಿಟ್ಟು ತುಂಗಹಾರಂಗಳನಿಟ್ಟು ।
ಅಂಗುಲಿಗೆ ರಂಗುಮಾಣಿಕ್ಯದುಂಗುರಂಗಳನಿಡುವ ॥ ೩ ॥

ಪೊಂಗೊಳಲೂದುತ್ತ ಶ್ರೀರಂಗ ಮನೆಗೆ ಬಂದರೆ ।
ಅಂಗನೆ ಅಂಗಜನಿವನಂಗಾಲಿಗೆರಗಬೇಕು ॥ ೪ ॥

ಸಿರಿದೇವಿಯಿವನ ಶ್ರೀಚರಣಕ್ಕೆರಗುವಳು ।
ಹರಿಸರ್ವೇಶ್ವರ ನಮ್ಮ ಹೊರೆವ ಬಿಡನೆ ಸಖಿ ॥ ೫ ॥
*
ಕರೆಯಲೆಮ್ಮ ಪ್ರಿಯನು ನಮ್ಮ ಕಳುಹೆ ಮಧುರೆಗೆ
ಮರುಳೆ ಮರಳಿ ಗೋಕುಲಕ್ಕೆ ತೆರಳಿ ಬಂದೆಯಾ ।
ಬರಸಿಕೊ ನಿನ್ನಿಷ್ಟವನ್ನು ಪ್ರಿಯಸಖನೆ ನಮ್ಮ
ಪರಮ ಬಂಧು ಮಾನಿನಿಯರನು ಪೇಳು ಮಧುಕರ ॥ ೧ ॥

ಎಂತು ಕೊಂಡೊಯ್ದೆ ನಮ್ಮ ಶ್ರೀಕಾಂತನ ಬಳಿಗೆ ನಮ್ಮ
ಕಾಂತೆಯೊಬ್ಬಳು ಅವನ ಪೇರುರದ ಮೇಲೆ ।
ಸಂತತ ನೆಲಸಿಹಳು ರಮೆಗು ನಮಗೂ ಮಹದಂತರಂತರ
ವೆಂಬರು ಮಹಾಂತರೆಲ್ಲರು ॥ ೨ ॥

ಗೊಲ್ಲತಿಯರ ಮನೆಯ ಬಿಟ್ಟನೆ ಅವನು ನಮ್ಮ
ಸೊಲ್ಲಿಗೆ ಸೋತು ಮನವನಿಟ್ಟನೆ ।
ಲಲಿತಗಂಧಕಸ್ತೂರಿಯಿಟ್ಟನೆ ರಂಗರಾಯ
ಮಾವಗೆ ದ್ವೇಷವ ತೊಟ್ಟನೆ ॥ ೩ ॥

ಕಸ್ತೂರಿಬೊಟ್ಟನಿಟ್ಟನೆ ಅವನು ನಮ್ಮ
ಮಸ್ತಕದಲ್ಲಿ ಮಲ್ಲಿಗೆ ತುರುಬಿದ ।
ವಸ್ತುಕೃಷ್ಣ ಮುಂದೆ ನಡೆಯಲು ಕಾಲತೊಡರು
ಮುತ್ತಿನಂದವೆ ಹೆಜ್ಜೆಗೊಂಡಿವೆ ॥ ೪ ॥

ಹರಿಯ ಬರವ ಕೇಳಿ ಹರುಷದಿನಾರಿಯರೆಲ್ಲ
ಮರುಳುಗೊಂಡು ವಿಕಳಗೆಟ್ಟರೆ ।
ತರಳಯೌವನವೃದ್ಧಸತಿಯರು ಬಂದರಾಗ
ಸಿರಿಯರಸನ ಕಾಂಬ ತವಕದಿ ॥ ೫ ॥

ಕೆಲರು ಉಣುತ ಉಡುತಲಿದ್ದರೆ ಕೆಲರು ತೊಡುತ
ಕೆಲರು ಕುಟ್ಟುತ ಬೀಸುತಲಿದ್ದರೆ ।
ಕೆಲರು ಅಡಿಗೆಗಳನ್ನು ಮರೆತರೆ ಕೈಗೆ ಕಂಕಣ
ಕೆಲರು ಇಡುತ ಕಾಲಲಿಟ್ಟರೆ ॥ ೬ ॥

ಕಾಲಕಡಗ ಕಿವಿಯಲ್ಲಿಟ್ಟರೆ ವಾಲೆ ತೆಗೆದು
ತೋಳಬಳೆಗೆ ಸಿಕ್ಕಿಸಿಬಿಟ್ಟರೆ ।
ನೀಲವರ್ಣನ ಕಾಂಬ ತವಕದಿ ನಾರಿಯರೆಲ್ಲ
ಮೇಲು ಮಾಳಿಗೆಯೇರಿ ಕುಣಿದರೆ ॥ ೭ ॥

ಇಟ್ಟ ಕಂಕಣ ಕಾಲಲಿಟ್ಟರೆ ತೊಟ್ಟಕುಪ್ಪಸ
ಬಿಟ್ಟು ತಲೆಯ ಮುಡಿಯ ಬಿಗಿದರೆ ।
ಅಟ್ಟ ಬಿಸಿಯ ಪಾಯಸವ ತಂದು ಸಿಟ್ಟಲಿ ಕೈ-
ಯಿಟ್ಟು ಮಕ್ಕಳ ಬೆಟ್ಟು ಸುಟ್ಟರೆ ॥ ೮ ॥

ಒಂದು ಕಣ್ಣಿಗೆ ಕಪ್ಪನ್ಹಚ್ಚುತ ಇಂದುಮುಖಿಯ
ರೊಂದು ಕಣ್ಣಿಗೆ ಹಚ್ಚಮರೆತರೆ ।

ನಂದನರಿಗೆ ಮೊಲೆಯನೂಡುತ ಬಿಸುಟು ಗೋ–
ವಿಂದನೆಂದು ಸತಿಯರೆದ್ದರೆ ॥ ೯ ॥

ಒಂದು ಕೈಯಲಿ ಪ್ರಾತೆಯ ಪಿಡಿದು ರಭಸದಿ ಮತ್ತೊಂದು
ಕೈಯಲಿ ಮಕ್ಕಳನೆಳೆಯುತ ।
ಬಂದೆವಲ್ಲ ಕೃಷ್ಣನ ವಿರಹದಿ ನಿಂದಿರಲಾರೆವೆಂದರು
ಮಂದಮಾರುತನಾಗ ಬೀಸಲು ॥ ೧೦ ॥

ರಂಗ ಚೆಲುವ ರಾಮ ಚೆಲುವನೊ ಹಾಗಲ್ಲವೆಂದು
ಅಂಗನೆಯರು ಜಗಳವಾಡುತ ।
ಪೊಂಗೊಳಲಧರದಿನವಚಿಕೊಂಡು ಪಾಡುವನಮ್ಮ
ಸಂಗಡಿಗ ರಂಗನಲ್ಲವೆ ॥ ೧೧ ॥

ರಾಮನಾವಚೆಲುವ ಹೋಗೆಲೆ ಶ್ಯಾಮವರ್ಣದ
ಕೋಮಲಾಂಗಧರನ ಪೋಲ್ವನೆ ।
ಭ್ರಾಮಕದ ಮಾತನಾಡುವೆ ನೀ ಹೋಗೆ ಹೆಣ್ಣೆ
ಸ್ವಾಮಿ ದಯಾಪರ ಕೃಷ್ಣನು ॥ ೧೨ ॥

ದೇವನಗ್ರಜ ಚೆಲುವನಾದರೆ ಅವನು ನಮಗೆ
ಭಾವನೆಂದು ತಿಳಿಯಬೇಕೆಲೆ ।
ಜೀವದೊಡೆಯನಾಗಬಲ್ಲನೆ ಭಾವ ಕರ್ಣ
ನೋವ ನುಡಿದು ನಿಷ್ಠುರವಾಕ್ಯದಿ ॥ ೧೩ ॥

ಕಪ್ಪು ಕೃಷ್ಣ ಚೆಲುವನಾದರೆ ಅವನು ತನ್ನ
ದರ್ಪದಿ ಪೂತನಿಯಸುವ ಹೀರಿದ ।
ಮುಪ್ಪಿಲವನ ಪಡೆದಳೆಂತೆಂಬ ಸಂತೋಷದಿಂದ
ಕಪ್ಪನ್ಹಚ್ಚಿ ಮೊಗವ ನೋಡಿದಳೆ ॥ ೧೪ ॥

ಹೆತ್ತತಾಯ ಸುಖವ ಪೇಳ್ವರೆ ಹಾಗಾದರಿನ್ನು
ಮರ್ತ್ಯರೊಳಗೆ ಎಣಿಸಲಾಗದು ।
ಕರ್ತೃ ಕೃಷ್ಣನವಳ ಉದರದಿ ಬಂದುದಿಲ್ಲ
ಸತ್ಯಸಂಕಲ್ಪನಿವನೆಲೆ ॥ ೧೫ ॥

ಸತಿಯರೆಲ್ಲ ಮನೆಗಳನೆ ಬಿಟ್ಟು ರತಿಪತಿಗೆ
ಅತಿಶಯದಿ ಮನವನಿಟ್ಟರೆ ।
ಸತತ ಮರುಳುಗೊಂಡು ಹರುಷದಿಹಿತದಿ ಅವನ
ಚಿತ್ತವ ಸೊರೆಗೊಂಡರೆಲ್ಲರು ॥ ೧೬ ॥

ಕೊಳಲಧ್ವನಿಯ ಕೇಳಿ ಬಂದರೆ ಚೆಲುವೆ ಅವನ
ಬಲೆಗೆ ಲಲನೆಯರು ಸಂದರೆ ।
ನಳಿನನಾಭ ಕಾಯೊ ಎಂದರೆ ಬಲೆಯ ಕವುಚಿ
ಮಲೆಯೊಳಗೆ ಬಿಸುಟು ಪೋದನೆ ॥ ೧೭ ॥

ಕೇಶಪಾಶಕೊಲಿದು ಬಂದರೆ ಅವನು ನಮ್ಮ
ಶ್ರೀಶ ಮಧ್ಯದಿಂದಲೊಲ್ಲನೆ ।
ವಾಸುದೇವ ಕಾಯೊ ಎಂದರೆ ಬಲೆಯ ಕವುಚಿ
ಮೋಸದಲ್ಲಿ ಬಿಸುಟು ಹೋದನೆ ॥ ೧೮ ॥

ಕೇಳಿದ್ದಿಲ್ಲವೆ ಚೋದ್ಯವೊಂದನು ಡೊಂಕುಕುಬುಜೆ
ನೀಲವರ್ಣನ ಸೆರಗ ಪಿಡಿದು ।
ಲೋಲನೇತ್ರೆಯಾದಳಾಗಲೆ ಡೊಂಕು ಹೋಗಿ
ಕೇಳಿಮೇಳಕೆ ಕರೆದಳಾತನ ॥ ೧೯ ॥

ಹೊರಡೆ ಅವನ ಚೆಲುವಿಕೆಯ ಕಂಡು ಗಂಧಪೂಸಿ
ಮರುಳುಮಾಡಿ ಮನೆಗೆ ಕರೆದಳು ।
ತರಳತನದಲವಳಮುಟ್ಟಲು ಡೊಂಕು ಹೋಗಿ
ಸಿರಿಯರಸಗೆ ಯೋಗ್ಯಳಾದಳು ॥ ೨೦ ॥

ಮುಂಜೆರಗ ಪಿಡಿದು ನಾಚುತ ನಡೆಯೆ ಮನೆಗೆ
ಅಂಜಿಸುತಲದೆ ಕಾಮವು ।
ಕಂಜಸಖನಸ್ತಮಯಿಸಿದ ನಾನಂಜೆನಿನ್ನು
ಮಂಜುಳಪಾದ ದೊರಕಿತೆಂದಳು ॥ ೨೧ ॥

ಗಂಧವಿತ್ತ ಕುಬುಜೆಯಂಗದ ಡೊಂಕು ತಿದ್ದಿ
ಹೊಂದಿ ರಜಕನಸುವ ಮಡುಹಿದ ।

ಮುಂದೆ ರಾಜಪಥದಿ ಸಿಂಗದಮರಿಯ ಪೋಲ್ವ
ನಂದಗೋಪತನಯ ನಡೆದನೆ ॥ ೨೨ ॥

ಧನುವ ಮುರಿದು ಗಜವ ಕೊಂದನೆ ದೈತ್ಯವನದ–
ಹನ ರಂಗದೊಳಗೆ ಬಂದನೆ ।
ದನುಜಮಲ್ಲರ ಮುಂದೆ ನಿಂದನೆ ಮಾವಕಂಸನ
ಮನಕೆ ಅಂದು ಭಯವ ತಂದನೆ ॥ ೨೩ ॥

ಕಾಲ ಪಿಡಿದು ಗಗನಕೆತ್ತಿದ ಚಾಣೂರನ್ನ
ಲೀಲೆಯಿಂದ ಸುತ್ತ ತಿರುಗಿಸಿ ರಾಯಮಲ್ಲ ।
ಬಾಲಕೃಷ್ಣ ಧರೆಯೊಳಪ್ಪಳಿಸಿ ಪುಡಿಯ ಮಾಡಿ
ಖೂಳಜನರ ಕುಲ ಕೆಡಿಸಿದ ॥ ೨೪ ॥

ಮುದ್ದುರಂಗನೊದ್ದ ಭರದಲಿ ಕೀಲು ಕಳಚಿ
ಬಿದ್ದ ರಥವು ಸೇನೆಯ ಮರ್ದಿಸಿದ ಪುಟ್ಟಕೈಯಲಿ ।
ಗುದ್ದೆ ಬೀಳೆ ಗಜದಘಟೆಗಳು ಅವನ ಹತ್ತಿ–
ಲಿದ್ದ ಸೇನೆ ನುಗ್ಗು ಮಾಡಿದ ॥ ೨೫ ॥

ಅದಕೋ ಬಂದ ಇದಕೋ ಬಂದನೆಂದು ವಿಶ್ವರೂಪಗೆ
ಬೆದರಿ ಬಿದ್ದು ಕೆಲಬರಳಿದರೆ ।
ಹೃದಯದಿಂದ ಕೃಷ್ಣ ತೊಲಗಲು ಶ್ವಾಸವಡಗಿ
ಕದನದಲ್ಲಿ ಕೆಲಬರಳಿದರೆ ॥ ೨೬ ॥

ಎಲ್ಲಿಯ ಕೃಷ್ಣ ಎತ್ತಣ ಕೃಷ್ಣನೆಂದು ಖಳರೆಲ್ಲ
ಬಿಲ್ಲು ಸಬಳ ಆಯುಧ ಪಿಡಿದರೆ ।
ಕೊಲ್ಲು ಕೊಲ್ಲುಯೆನುತಲಾಗಲೆ ಹಲ್ಲ ಕಿತ್ತು
ಕಲ್ಲಕಣೆಯ ಮಾಡ್ದ ಹೋಗೆಲೆ ॥ ೨೭ ॥

ರಥವನಿಟ್ಟು ರಥವನೊರಸಿದ ಗಜವನಿಟ್ಟು
ಅತಿಸಮರ್ಥ ಗಜವ ಕೆಡಹಿದ ।
ರಥಚಕ್ರಗಳ ತೆಗೆದು ತೆಗೆದಿಟ್ಟು ಚಕ್ರಧರನು
ಕ್ಷಿತಿಯೊಳಕ್ಷೋಹಿಣಿ ಬಲಕೆ ಕ್ಷಯವಿತ್ತ ॥ ೨೮ ॥

ತರುವ ಕಿತ್ತು ಅದರ ಘಾಯದಿ ಮುಕುಂದ ಕೊಲ್ಲನೆ
ಕರಿತುರಗನರಸಮೂಹವ ।
ಹರಿಯ ಧುರಕೆ ಅಂಜಿ ಓಡುವ ಗಜಘಟೆಗಳ
ಭರಕೆ ಸೈನ್ಯ ಚೂರ್ಣವಾಗದೆ ॥ ೨೯ ॥

ಮಾವ ನೀನು ನಮ್ಮ ಕರೆಸಿದೆ ಬಿಲ್ಲಹಬ್ಬಕ್ಕೆ
ಸಾವುದಕ್ಕೆ ಮಲ್ಲರ ಕಳುಹಿದೆ ।
ಜೀವಸಹಿತ ನಿನ್ನ ಬಿಡುವೆನೆ ಉಪಾಯದಿಂದ
ಮಾವ ಜನರ ಕೊಲ್ಲಿಸಿ ನೋಡಿದೆ ॥ ೩೦ ॥

ಲಂಘಿಸಿ ಮಂಚದಲ್ಲಿದ್ದ ಕಂಸನ ಶಿರವ ಗುದ್ದಿ
ರಂಗದ ನೆಲದ ಮೇಲೆ ಕೆಡಹಿದ ।
ರಂಗರಾಯ ಖಳನ ಮರ್ದಿಸಿ ಅವನ ಹೆಂಡರ
ಮಂಗಳ ಸೂತ್ರದ ಗಂಟ ಬಿಡಿಸಿದ ॥ ೩೧ ॥

ಗೋಕುಲದಿ ಶಕಟಪೂತನಾಧೇನುಕಾದ್ಯ
ನೆಕ ಖಳರ ಕೊಂದ ಕೃಷ್ಣಗೆ ।
ಲೋಕದೊಳಗೆ ಅನ್ಯರಾಸೆಯೆ ಆಯುಧಗಳು
ಬೇಕೆ ಬಾಹುಬಲದ ಧೀರಗೆ ॥ ೩೨ ॥

ಇಂದ್ರ ತನ್ನ ಭಕ್ತಿಭರದಿಂದ ಕಳುಹೆ ಬಂದ
ಸ್ಯಂದನವನು ಕೃಷ್ಣನೇರಿದ ।
ಎಂದು ಬಲ್ಲ ಬುಧರು ತುತಿಸಲು ಸಮರದಲ್ಲಿ
ಕೊಂದನಂದು ಕಂಸನಾಳ್ಗಳ ॥ ೩೩ ॥

ಕಟ್ಟ ಬಿಡಿಸಿ ತಾಯಿತಂದೆಯೆ ಋಣವ ತಿದ್ದಿ
ಪಟ್ಟವನುಗ್ರಸೇನಗೆ ಕಟ್ಟಿಸಿದ ।
ಶಿಷ್ಟರೊಡೆಯ ಹಯವದನನ ತುತಿಸಿ ತುತಿಸಿ
ಅಟ್ಟುವೆ ನಮ್ಮ ಭವದ ಬೇಸರ ॥ ೩೪ ॥

ಅಟ್ಟಿದನಿಕೋ ತನ್ನ ಭೃತ್ಯನ ವಿಠಲ ನಮ್ಮ
ಬಿಟ್ಟವನಲ್ಲ ಕೇಳು ಕೆಳದಿ ಹಯವದನನ್ನ ।

ದಿಟ್ಟ ವಿಠಲನ್ನ ಮಹಿಮೆಯ ಕಂಡು ಜಗ
ಜಟ್ಟಿಯೆಂದು ಜನ ಕೊಂಡಾಡಿತು ॥ ೩೫ ॥

ಮೊಲೆಯನುಂಡು ಪೂತನಿಯ ಮಲಗಿದ್ದ ಶಕಟನ್ನ ।
ತುಳಿದ ವಾತನ್ನ ಕೊಂದ ಹಯವದನ ಬಲ್ಲಿದ ॥ ೩೬ ॥
*
ಮಧುರಾಪುರಿಯಲ್ಲಿ ನಮ್ಮ ನಲ್ಲನಿಹನೆ ಈ ವ್ರಜದ
ಸದನವನು ತಂದೆ ತಾಯಿ ಬಂದು ಬಳಗಗಳ ।
ಒದಗಿಬಹ ಗೋಪರನು ಗೋವುಗಳನೊಮ್ಮಮ್ಮೆ ನಮ್ಮವಿನೋದದ
ಕತೆಗಳನು ತುತಿಸುವನೆ ರಸಿಕ ॥ ೧ ॥

ಅಗರು ಗಂಧದಕರವ ಶಿರದಲ್ಲಿಟ್ಟು ಸಿರಿಯರಸ ತ–
ನ್ನಗಲಿ ಬಳಲುವ ಬಾಲೆಯರ ಕೂಡನೆ ।
ಸೊಗಸು ನುಡಿಯಿಂದ ನಮ್ಮ ಸೋಲಿಸಿ ಮುಕುಂದ ತನ್ನ
ಮುಗುಳುನಗೆಯಿಂದ ಮುದ್ದಿಸಿ ಮೆರೆಯನೆ ॥ ೨ ॥

ಸನಕಾದಿಮುನಿಮನಕೆ ನಿಲುಕದವ ತಾನೆ ಗಡ
ಮನೆಮನೆಗೆ ಬಂದೆಮ್ಮ ಒಲಿಸಲೇಕೆ ।
ಮನಬಂದ ನಾಯಕನ ಮೆಚ್ಚಿದೆವಕಟ ಬರಿದೆ
ಮುನಿದವನನುಗ ಹೋಗೆಲೊ ಮಧುಕರ ॥ ೩ ॥

ಶ್ರೀಕಾಂತನೆಂದ ಸವಿಮಾತುಗಳ ಕೇಳಿ ನಮ್ಮ
ಶೋಕವ ಕಳೆಯಲೋಸುಗ ಮನಸಿನ ।
ನೂಕು ನೂಕೆಂಬುದುಚಿತವೆ ಮಾನಿನಿಯರನೆಂದಾ
ಕೃಷ್ಣ ನುಡಿದ ನುಡಿಗಳ ನುಡಿಯಲಿ ॥ ೪ ॥

ಸಕಲದೇವತೆಗಳಿಗು ಸಕಲಮುನಿಗಳಿಗು ।
ಅಕಳಂಕಚರಿತ ಗೋವಿಂದರಾಯನೆ ಗತಿ ॥ ೫ ॥
*
ಕಂಜಾಕ್ಷ ಹರಿಯ ಕಂಡಲ್ಲದೆ ಈ ।
ಪಂಜರದಿ ಈ ಗಿಳಿ ನಿಲ್ಲದೆ ॥ ಪ ॥

ಬಾಲತನದಲಿ ಮನೆಮನೆಯ ಹೊಕ್ಕು
ಪಾಲಗುಡಿವನು ಮನದಣಿಯ ।
ಲಾಲಿಸಿದವನು ಇನ್ನು ಮುನಿಯ
ಲೋಲಾಕ್ಷಿ ಬಿಡನ್ಯರ ಗಸಣೆಯ ॥ ೧ ॥

ಏಳು ವರ್ಷದ ಶಿಶು ಪೋಗಿ
ಆಲಸ್ಯ ಹಸಿ ತೃಷೆಯ ನೀಗಿ ।
ಶೈಲವನೆತ್ತಿದ ನಮಗಾಗಿ
ಕಾಲ ಮೇಲೆ ಬಿದ್ದನಿಂದ್ರ ಬಾಗಿ ॥ ೨ ॥

ಕಾಳಿಂದಿ ಮಡುವಿನೊಳಾಡಿ
ಕಾಳಿಯನಾಗಗೆ ಮದ್ದ ಹೂಡಿ ।
ಮೇಲೆ ಅವನೊಳು ಕೃಪೆ ಮಾಡಿ
ಪಾಲಿಸಿದ ಕರುಣದಿ ನೋಡಿ ॥ ೩ ॥

ಪಾರಿಜಾತದ ಹೂಗಳ ತಂದು
ನಾರದಮುನೀಂದ್ರ ತಾನೆ ಬಂದು ।
ಸಾರಿದನಲ್ಲೆ ಗತಿ ನೀನೆಂದು
ನರಸುರಾದಿಗಳಿಗೆ ಈತ ಬಂಧು ॥ ೪ ॥

ವೃಂದಾವನದೊಳಿವನ ಲೀಲೆ ಆ
ನಂದವನುಣಿಸಿತೆಲೆ ಬಾಲೆ ।
ಎಂದವನ ಕತೆ ಕರ್ಣದೋಲೆ ಹಾ-
ಗೆಂದು ಭಾವಿಸೆ ಪುಣ್ಯಶೀಲೆ ॥ ೫ ॥

ಸಕಲಸುರರ ಶಿರೋರನ್ನ
ಮುಕುತಿದಾಯಕ ಸುಪ್ರಸನ್ನ ।
ಶ್ರೀಕೃಷ್ಣನಟ್ಟಿದನುದ್ಧವನ್ನ ಒಂದು
ವಾಕು ಕೇಳಿ ಮನ್ನಿಸೆಯವನ ॥ ೬ ॥

ಚೆಲುವ ಹಯವದನನ್ನ ನೀರೆ
ನಲ್ಲನಿಲ್ಲಿಗೆ ಬಾರದಿರೆ ।

ಸುಲಭನ್ನ ಬೇಗ ಕರೆತಾರೆ ನಾ–
ವೆಲ್ಲ ಅವನಲ್ಲಿಗೆ ಹೋಗ ಬಾರೆ ॥ ೭ ॥
*
ಚಿಂತೆ ಬೇಡಲೆ ತಾಯಿ ನಿಮ್ಮನು ಸಂತಸ–
ಬಡಿಸಲೆಂದೆನ್ನ ಶ್ರೀಕಾಂತ ಕಳುಹಲು ಬಂದೆ
ಸಕಲ ಮನೋರಥದಿ ಕಂತುಪಿತನ ಕರೆದುತಹೆನೆಂದು
ಅಂತರಂಗದಿ ಹರಿಯ ನೆನೆನೆನೆದು ಏಕಾಂತಭಕುತನುದ್ಧವ
ನಡೆದನು ಕೃಷ್ಣನಿದ್ದೆಡೆಗೆ

ಇಂತು ಹರಿಯ ನೆನೆನೆನೆದು ಕರಗುವ ಗೋಪಕಾಂತೆಯರನೆ
ಕಂಡುದ್ಧವ ಸಂತೈಸಬೇಕೆಂದು
ಹಯವದನ ಶ್ರೀಕೃಷ್ಣನಿದ್ದೆಡೆಗೆ ಸಂತೋಷದಿಂದ ನಡೆತಂದ

ಕೃಷ್ಣ ಕೃಷ್ಣ ಕೃಪಾಳು ವಿಷ್ಣು ವಾಮನ ವಿಜಯಸಖನೆ ಎ
ನ್ನಿಷ್ಟದಾಯಕನೆಈ ಗೋಕುಲದ ಗೋಪಿಯರ
ತೃಷ್ಣೆಯ ಬಿಡಿಸಯ್ಯಯೆಂದು
ವೈಷ್ಣವಾಗ್ರಣಿ ಉದ್ಧವ ಬಿನ್ನಹವ ಮಾಡಿದನು

ಉದ್ಧವನ ಬಿನ್ನಹವ ಕೈಕೊಂಡು ದೇವಾರಾಧ್ಯ
ಈ ಗೋಕುಲದ ಗೋಪಿಯರ ಮನದಲ್ಲಿ ನಿಂದ
*
ಎನ್ನ ಮನದರಸ ಕೃಷ್ಣಯ್ಯ
ಇನ್ನೊಮ್ಮೆ ನೀ ಕುಣಿದಾಡು ಥೈಥೈಯ ॥ ಪ ॥

ಶ್ಯಾಮಲ ಕೋಮಲ ದಿವ್ಯಶರೀರ
ಶ್ರೀಮನೋಹರ ಸುವಿಹಾರ ।
ಸಾಮದಗಾನರು ನಿದನಿ ಪದ ಪಪ ಮಮ
ಮಾಮರ್ತ್ಯ ಎನ್ನಲಾಡು ಥೈಥೈಥೈಯ ॥ ೧ ॥

ತಾನಾನಾ ನಾನಾನಾ ತನು ತಂದನಾನಾ
ತಾನಾನಾ ನಾನಾನಾ ನತನು ತಂದನಾನಾ ।
ತಾನಾನಾ ನಾನಾನಾ ತಂದನಾಯೆಂದು

ಹನುಮಂತ ಪಾಡಲಾಡು ಥೈಥೈಯ್ಯ ॥ ೨ ॥

ಅರ್ತಿಯಿಂ ಧಿಂಧಿಂಧಿಮಿಕೆಂಬ ಗಂಧರ್ವ–
ರೀತರದ ಮದ್ದಳೆಗತಿಗೆ ।
ತತ್ತಾ ಥೈಥೈಥೈಥೈಥೈಯೆಂದು
ಸುತ್ತ ತಾವೊತ್ತಲಾಡು ಥೈಥೈಯ್ಯ ॥ ೩ ॥

ರಂಭೆ ಬಂದಳೆಲೆ ರಸಿಕರರಸ ತ್ರಿ–
ಯಂಬಕ ಬಂದ ನಾರದ ಬಂದನು ।
ತುಂಬುರ ನಿನ್ನ ನುತಿಸುತ್ತ ಬಂದನು
ಅಂಬುಜಾಕ್ಷ ಕುಣಿದಾಡೊ ಥೈಥೈಯ್ಯ ॥ ೪ ॥

ಉಂಗುರವಿಟ್ಟಂಗುಲಿಗಳಿಂದ ರಾ–
ಗಂಗಳ ಬಾರಿಸುತ್ತ ಬಗೆಬಗೆಯ ।
ಸಂಗೀತದಂಗವನಿತ್ತು ರಸಂಗಳ–
ಪಾಂಗದಿಂದ ಕುಣಿದಾಡು ಥೈಥೈಯೆಂದು ॥ ೫ ॥

ಅಷ್ಟೈಶ್ವರ್ಯದ ಅದ್ಭುತಬಾಲನೆ
ಮೆಟ್ಟಿದ ಹೆಜ್ಜೆ ಇಳಿಯದಂದದಿ ।
ಹೊಟ್ಟೆಯ ಜಗವಲುಗದಂದದಿ ಲಘುತೆಯಿಂ
ಹೃಷ್ಟಮೂರುತಿ ಕುಣಿದಾಡೊ ಥೈಥೈಯೆಂದು ॥ ೬ ॥

ಅಘಕುಲದೂರನೆ ಅಮರಾಧಾರನೆ
ನಿಗಮವ ತಂದ ಹಯವದನನೆ ।
ಮೃಗಧರನಂದದಿ ಮುಗುಳುನಗೆಯಿಂದಲಿ
ಸುಗುಣನಿಧಿಯೆ ಕುಣಿದಾಡು ಥೈಥೈಯೆಂದು ॥ ೭ ॥

॥ ಶ್ರೀಕೃಷ್ಣಾರ್ಪಣಮಸ್ತು ॥